Ref.No.54/2020, Further cross of WW-1 on merits,

Page No.15

ದಿನಾಂಕಃ 26-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಇಬ್ಬರು ವಕೀಲರ ಒಪ್ಪಿಗೆ ಮೇರೆಗೆ ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ - 1 ನೇ ಪಾರ್ಟಿ ಪರವಾಗಿಃಶ್ರೀ. SVN ವಕೀಲರಿಂದ

| | | |
|---|---|---|
| Ex. | W-34 | List of Members of the Union in the year 2018. |
| Ex. | W-35 | Resolution of the meeting dated 26.01.2018 |
| Ex. | W-36 | Resignation Letters (7 Nos.) |

ಮುಂದುವರೆದ ಪಾಟೀ ಸವಾಲುಃ 2 ನೇ ಪಾರ್ಟಿ ಪರವಾಗಿ ಶ್ರೀಃಜೆ ಪಿ ವಕೀಲರಿಂದ

ನಿಡಬ್ಲ್ಯೂ-34 ಲಿಸ್ಟಿನಲ್ಲಿ ಇರುವ ಕೆಲಸಗಾರರ ಪೈಕಿ ಎಷ್ಟು ಜನ ಈವತ್ತಿನ ದಿವಸ ಇದ್ದಾರೆ ಮತ್ತು ಎಷ್ಟು ಜನ ಇರುವುದಿಲ್ಲ ಎಂದರೆ ಸಾಕ್ಷಿ ಈವತ್ತಿಗೆ 32 ಜನ ಇದ್ದಾರೆ ಮತ್ತು 18 ಜನ ಯೂನಿಯನ್ನಿಂದ ಹೊರಗೆ ಹೋಗಿದ್ದಾರೆ ಎನ್ನುತ್ತಾರೆ. 32 ಜನ ಕೆಲಸಗಾರರು ನಮ್ಮ ಯೂನಿಯನ್ಗೆ ವಂತಿಗೆಯನ್ನು ಕಟ್ಟುತ್ತಿದ್ದಾರೆ ಮತ್ತು ಅದಕ್ಕೆ ನಾವು ರಶೀದಿ ಕೊಡುತ್ತಿದ್ದೇವೆ. 18 ಜನ workers ರಾಜೀನಾಮೆ ಕೊಟ್ಟು ನಮ್ಮ ಯೂನಿಯನ್ನನ್ನು ಬಿಟ್ಟು ಹೋಗಿದ್ದಾರೆ ಮತ್ತು ಸದರಿ ರಾಜೀನಾಮೆ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ದಾಖಲಾತಿಗಳನ್ನು ನೋಡಿ ನ್ಯಾಯಾಲಯದ ಮುಂದೆ 7 ಜನರ ರಾಜೀನಾಮೆ ಪತ್ರಗಳು ಇವೆ ಎಂದು ಹೇಳುತ್ತಾರೆ. ಉಳಿದ workers ನ ರಾಜೀನಾಮೆ ಪತ್ತಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಿಡಬ್ಲ್ಯೂ-34 ರ ದಾಖಲಾತಿಯಲ್ಲಿ ನಮೂದು ಮಾಡಿರುವ 50 workers ಪೈಕಿ 10-12 workers ರನ್ನು 2 ನೇ ಪಾರ್ಟಿ ಕೆಲಸದಿಂದ ತೆಗೆದುಹಾಕಿದ್ದಾರೆ. 50 ಜನರ ಪೈಕಿ ಯಾರೂ ರಾಜೀನಾಮೆಯನ್ನು 2 ನೇ ಪಾರ್ಟಿಗೆ ಕೊಟ್ಟಿದ್ದಾರಂದು ನನಗೆ ಮಾಹಿತಿ ಇಲ್ಲ. ನನ್ನನ್ನೂ ಸಹ ಕೆಲಸದಿಂದ ತೆಗೆದುಹಾಕಿದ್ದಾರೆ . ನನ್ನನ್ನು ಕೆಲಸದಿಂದ ತೆಗೆದ ನಂತರ

ಸದರಿ ಆದೇಶವನ್ನು ಅಪ್ರೂವಲ್ ಪಡೆಯಲು ಈ ನ್ಯಾಯಾಲಯದಲ್ಲಿ 2 ನೇ ಪಾರ್ಟಿ ಕೇಸು ಹಾಕಿದ್ದಾರೆ ಎಂದರೆ ಸರಿ . ಅಪ್ರೂವಲ್ ಕೋರಿ ಹಾಕಿದ ಕೇಸು ಈ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. 32 ಜನ workers ಗೆ 2 ನೇ ಪಾರ್ಟಿ ಇಂಕ್ರಿಮೆಂಟ್ ಕೊಡುತ್ತಿದೆ ಎಂದರೆ ಸಾಕ್ಷಿ 2023 ಇಂಕ್ರಿಮೆಂಟ್ ಸಿಕ್ಕಿದೆ ಮತ್ತು 2018 ರಿಂದ 2020 ರವರೆಗಿನ ಅವಧಿಗೆ ಇಂಕ್ರಿಮೆಂಟ್ ಸಿಕ್ಕಿಲ್ಲ ಎಂದು ಹೇಳುತ್ತಾರೆ. ಯೂನಿಯನ್ ಮೆಂಬರ್ಸ ನಿಂದ 2023 ಇಂಕ್ರಿಮೆಂಟ್ ಕೊಟ್ಟಿದ್ದಾರೆಂದು ಮಾಹಿತಿ ಗೊತ್ತಾಗಿದೆ. 32 ಜನ workers 2 ನೇ ಪಾರ್ಟಿ ಜೊತೆ ಸೆಟ್ಲಮೆಂಟ್ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದೆ. ಏನು ಸೆಟ್ಲಮೆಂಟ್ ಮಾಡಿಕೊಂಡಿದ್ದಾರೆ ಎಂಬ ವಿವರಗಳು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.